# 2 ನೇ ಹೆಚ್ಚುವರಿ ಪ್ರಥಮ ದರ್ಜೆಯ  ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ನಂಜನಗೂಡು.

**ಓ ಎಸ್ ನಂ.312-2017** **ಪಿ . ಡಬ್ಲುಃ 1**

| | |
|---|---|
| ಸಾಕ್ಷಿದಾರರ ಹೆಸರು<br>ವಾಸ್ತವ್ಯ | ಶಿವಣ್ಣನಾಯಕ<br>ಸುತ್ತೂರು ಗ್ರಾಮ, ನಂಜನಗೂಡು ತಾ. |
| | **ಸತ್ಯ ಪ್ರತಿಜ್ಞೆಯ** ಮೇರೆಗೆ **ದಿನಾಂಕ** 24-08-2023. |

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ  ಶ್ರೀ ಸಿ.ಎಲ್.ಬಿ   ವಕೀಲರಿಂದಃ**

6. ನಮ್ಮ ಬಿಳುಗಲಿ ಗ್ರಾಮದ ಎಲ್ಲಾ ಜಮೀನುಗಳು ನೀರಾವರಿ ಜಮೀನುಗಳು ಎಂದರೆ ಸರಿ. ದಾವಾ ಐಟಂ ನಂ.1 ರ ಸ್ವತ್ತು ಸಹ ನೀರಾವರಿ ಜಮೀನು ಎಂದರೆ ಸರಿ. ನಾನು ದಾವಾ ಸಲ್ಲಿಸುವ ಸಮಯ ದಾವಾ 1 ನೇ ಐಟಂ ಸ್ವತ್ತು ಗುಂಟೆ ಒಂದಕ್ಕೆ ರೂ.500/- ಗಳ ಮೌಲ್ಯ ಇತ್ತು. ಬಜಾರಿನಲ್ಲಿ ನಡೆಯುತ್ತಿದ್ದ ಆಧಾರದ ಮೇರೆಗೆ ದಾವಾ ಷೆಡ್ಯೂಲ್ ಸ್ವತ್ತಿನ ಮೌಲ್ಯ ರೂ.500/- ಎಂದು ನಾನು ಹೇಳುತ್ತಿದ್ದೇನೆ. ನಾನು ದಾವಾ ಸಲ್ಲಿಸುವ ವೇಳೆ ದಾವಾ ಷೆಡ್ಯೂಲ್ ಸ್ವತ್ತಿನ 1 ನೇ ಐಟಂ ಸ್ವತ್ತಿನ ಮೌಲ್ಯ ನೋಂದಣಾಧಿಕಾರಿಗಳು ಕಚೇರಿ ಮೌಲ್ಯದ ಪ್ರಕಾರ ಎಷ್ಟು ಇತ್ತು ಎಂದು ನನಗೆ ಗೊತ್ತಿಲ್ಲ.

7. ದಾವಾ ಐಟಂ ನಂ.2 ರ ಸ್ವತ್ತು ಸಹ ನೀರಾವರಿ ಜಮೀನು ಎಂದರೆ ಸರಿ. ದಾವಾ ಐಟಂ ನಂ.2 ರ ಸ್ವತ್ತಿನ ಮೌಲ್ಯ ದಾವಾ ಸಲ್ಲಿಸುವ ವೇಳೆಗೆ ಎಷ್ಟು ಇತ್ತು ಎಂದು ನನಗೆ ಗೊತ್ತಿಲ್ಲ. ದಾವಾ ಸಲ್ಲಿಸುವ ವೇಳೆಗೆ ದಾವಾ ಷೆಡ್ಯೂಲ್ ಐಟಂ ನಂ.1 ಮತ್ತು 2 ರ ಮೌಲ್ಯವು ಎಕರೆಗೆ ರೂ.5,00,000/- ಗಳಷ್ಟಿತ್ತು. ನಾನು ಹೇಳುವಂತೆ ದಾವಾ ಸಲ್ಲಿಸುವ ವೇಳೆಗೆ ದಾವಾ ಷೆಡ್ಯೂಲ್ ಐಟಂ ನಂ.1 ಮತ್ತು 2 ರ ಮೌಲ್ಯವು ರೂ.5,00,000/- ಗಳಷ್ಟು ಇರಲಿಲ್ಲ, ಸುಮಾರು 10 ರಿಂದ 15 ಲಕ್ಷಗಳಷ್ಟಿತ್ತು ಎಂದರೆ ಸರಿಯಲ್ಲ.

8. ದಾವಾ ಸಲ್ಲಸುವ ಸಮಯ ನಿಮ್ಮ ಗ್ರಾಮದಲ್ಲಿ ನಿವೇಶನದ ಮೌಲ್ಯ ಎಷ್ಟಿತ್ತು ಎಂಬ ಪ್ರಶ್ನೆಗೆ ಸಾಕ್ಷಿ ನಿವೇಶನದ ಆಧಾರದ ಮೇರೆಗೆ 20 ರಿಂದ 50 ಸಾವಿರ ರೂಪಾಯಿಗಳ ವೆರೆಗೆ ಮೌಲ್ಯ ಇತ್ತು ಎಂದು ನುಡಿಯುತ್ತಾರೆ. ದಾವಾ ಐಟಂ 3 ನೇ ಸ್ವತ್ತಿನ ಮೌಲ್ಯ ದಾವಾ ಸಲ್ಲಿಸುವ ವೇಳೆಗೆ ಎಷ್ಟಿತ್ತು

ಎಂದು ನನಗೆ ಗೊತ್ತಿಲ್ಲ. ನಾನು ದಾವಾ 3 ನೇ ಐಟಂ ಸ್ವತ್ತಿನ ಮೌಲ್ಯವು ಎಷ್ಟಿರುತ್ತದೆ ಎಂದು ನನ್ನ ವಾದ ಪತ್ರದಲ್ಲಿ ಹೇಳಿ ಬರೆಸಿರುವುದಿಲ್ಲ

9.ನಿಪಿ-1 ರ ಛಾಪಾಗಾದವನ್ನು ಕುಮಾರಸ್ವಾಮಿ ವಕೀಲರು ತಂದಿದ್ದು, ಸದರಿ ದಾಖಲೆಯನ್ನು ಅವರೇ ಬರೆದಿರುತ್ತಾರೆ. ನಿಪಿ-1 ಕ್ಕೆ ಮಾಹಿತಿಯನ್ನು ಪಂಚಾಯ್ತಿದಾರರು ನೀಡಿ ಹೇಳಿ ಬರೆಸಿರುತ್ತಾರೆ. ನಿಪಿ-1 ಕ್ಕೆ ಸಾಕ್ಷಿದಾರರಾಗಿ ಮಲ್ಲಿಕಾರ್ಜುನನಾಯಕ, ರಂಗಪ್ಪಾಜಿನಾಯಕ, ವೆಂಕಟನಾಯಕ, ನಾನು, ನನ್ನ ಅಣ್ಣಂದಿರು ಮತ್ತು ಅವರ ಮಕ್ಕಳುಗಳೆಲ್ಲರೂ ಸಹಿ ಮಾಡಿರುತ್ತೇವೆ. ನಿಪಿ-1 ಅನ್ನು ನಾನು ನನ್ನ ವಕೀಲರ ಮತ್ತು ಮೇಲೆ ಹೇಳಿದ ವ್ಯಕ್ತಿಗಳು ಎಲ್ಲಾ ಸೇರಿ ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಿಪಿ-1 ಕ್ಕೂ ಪ್ರತಿವಾದಿಗಳಿಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ದಿ.20-02-2011 ರಲ್ಲಿ ನಾನು ಹೇಳುವಂತೆ ಯಾವುದೇ ಪಂಚಾಯ್ತಿ ನಡೆದಿರುವುದಿಲ್ಲ ಮತ್ತು ನಿಪಿ-1 ರ ದಾಖಲೆಯನ್ನು ತಯಾರು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. 1987 ರಲ್ಲಿಯೇ ವಿಭಾಗವಾಗಿರುವುದರಿಂದ ಮತ್ತೊಮ್ಮೆ ನಿಪಿ-1 ರಂತೆ ವಿಭಾಗ ಮಾಡಿಕೊಡುವ ಪ್ರಶ್ನೆ ಉದ್ಭವಿಸುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಪ್ರತಿವಾದಿಗಳು ಸ್ವತ್ತನ್ನು ಮಾರಾಟ ಮಾಡುವ ಸಂಬಂಧ ನಿಪಿ-1 ಅನ್ನು ಬರೆದುಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ನಾನು ಹೇಳುವಂತೆ ಪ್ರತಿವಾದಿಗಳು ಸ್ವತ್ತನ್ನು ಮಾರಾಟ ಮಾಡುವ ಸಂಬಂಧ ನಿಪಿ-1 ರ ಸ್ವತ್ತನ್ನು ಬರೆದುಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ನಾನು ವಾಸ್ತವಾಂಶಕ್ಕೆ ವಿರುದ್ಧವಾಗಿ ದಾವಾವನ್ನು ಸಲ್ಲಿಸಿ ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ಸ್ವತ್ತನ್ನು ಕಬಳಿಸಬೇಕೆಂಬ ಉದ್ದೇಶದಿಂದ ಈ ದಾವಾವನ್ನು ಸಲ್ಲಿಸಿರುವುದರಿಂದ ನಾನು ಈ ದಾವಾದಲ್ಲಿ ಕೋರಿರುವ ಪರಿಹಾರಕ್ಕೆ ಅರ್ಹನಲ್ಲ ಎಂದರೆ ಸರಿಯಲ್ಲ. ಯಾವುದೇ ವ್ಯಾಜ್ಯ ಕಾರಣ ಇಲ್ಲದೇ ಇದ್ದರೂ ಸಹ ಸುಳ್ಳು ಕಾರಣವನ್ನು ನೀಡಿ ಈ ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)

**ಓ . ಹೇ. ಕೇ. ಸರಿ. ಇದೆ**

**ಸಹಿ/-**

**ಕಿ.ಪ್ರ.ದ. ನ್ಯಾ ದಂ. ನಂಜನಗೂಡು**